**ದಿನಾಂಕಃ 07.07.2025 ರಂದು ಸಾಕ್ಷಿಗೆ ಪುನಃ ಪ್ರಮಾಣವಚನ ಬೋಧಿಸಲಾಯಿತು.**

**ಪಾಟಿ ಸವಾಲುಃ ವಾದಿ ಪರ ಶ್ರೀ ಇ ಎನ್ ವಕೀಲರಿಂದ.**

ಈ ಹಿಂದೆ ನನ್ನ ತಂದೆ, 6 ನೇ ಪ್ರತಿವಾದಿ ಮತ್ತು 8 ನೇ ಪ್ರತಿವಾದಿ ಸೇರಿ ಒಬ್ಬರೆ ವಕೀಲರನ್ನು ನೇಮಕ ಮಾಡಿಕೊಂಡು ಒಟ್ಟಾಗಿ ಪ್ರತಿವಾದಪತ್ರ ಸಲ್ಲಿಸಿದ್ದರು ಅಂದರೆ ಸರಿ. ಈ ಹಿಂದೆ ನನ್ನ ತಂದೆ, 6 ನೇ ಪ್ರತಿವಾದಿ ಮತ್ತು 8 ನೇ ಪ್ರತಿವಾದಿರವರು ಪ್ರತ್ಯೇಕವಾಗಿ ಸಾಕ್ಷಿ ಹೇಳಿಕೆ ನೀಡಿರುತ್ತಾರೆ ಅಂದರೆ ಸರಿ. 6 ನೇ ಪ್ರತಿವಾದಿ ಅಗಸನಹಳ್ಳಿ ಗ್ರಾಮದಲ್ಲಿರುವ ಆರ್ ಸಿ ಪಾಟೀಲ್ ರವರಿಗೆ ಸೇರಿದ ರೈಸ್ ಮಿಲ್ ಮತ್ತು ಮನೆಯಲ್ಲಿ ವಾಸ ಇರುತ್ತಾರೆ ಅಂದರೆ ಸರಿ. 6 ನೇ ಪ್ರತಿವಾದಿಯ ಜೊತೆ 3 ನೇ ಪ್ರತಿವಾದಿ ರೈಸ್ ಮಿಲ್ ಮತ್ತು ಮನೆಯಲ್ಲೆ ವಾಸ ಇರುತ್ತಾರೆ ಅಂದರೆ ಸರಿ. ಪ್ರತಿವಾದಿ ನಂ.3 ಮತ್ತು 6 ರವರು ನಿಮ್ಮ ತಂದೆಗೆ ವಿಶ್ವಾಸಿಕರು ಅಂದರೆ ಸಾಕ್ಷಿ ಅವರ ಪರಿಚಯ ನನ್ನ ತಂದೆಗೆ ಇತ್ತು ಎನ್ನುತ್ತಾರೆ. ಆರ್ ಸಿ ಪಾಟೀಲ್ ರವರ ಕುಟುಂಬದ ಬಗ್ಗೆ ನಿಮ್ಮ ತಂದೆಗೆ ಚೆನ್ನಾಗಿ ಪರಿಚಯ ಇತ್ತು ಅಂದರೆ ಸಾಕ್ಷಿ ಪರಿಚಯ ಇತ್ತು ಎನ್ನುತ್ತಾರೆ. ನಿಡಿ-4(ಸಿ) ಮತ್ತು ನಿಡಿ-6(ಡಿ) ನಿಮ್ಮ ತಂದೆಯ ಸಹಿಗಳು ಇರುತ್ತವೆ ಅಂದರೆ ಸಾಕ್ಷಿ ನೋಡಿ ಒಪ್ಪಿರುತ್ತಾರೆ. ಆರ್ ಸಿ ಪಾಟೀಲ್ ರವರಿಗೆ 1 ನೇ ಪ್ರತಿವಾದಿ ಹೆಂಡತಿ ಇರುತ್ತಾರೆ ಅವರು ದ್ವಾರಹಳ್ಳಿಯಲ್ಲಿ ವಾಸ ಇರುತ್ತಾರೆ ಅಂದರೆ ಸರಿ. ಆರ್ ಸಿ ಪಾಟೀಲ್ ರವರಿಗೆ 1 ನೇ ಪ್ರತಿವಾದಿಯ ಮೂಲಕ 2 ಗಂಡು ಮಕ್ಕಳು, 4 ಜನ ಹೆಣ್ಣು ಮಕ್ಕಳು ಜನಿಸಿರುತ್ತಾರೆ ಅಂದರೆ ಸಾಕ್ಷಿ ನನಗೆ 2 ಜನ ಗಂಡು ಮಕ್ಕಳು ಜನಿಸಿರುವುದು ಮಾತ್ರ ಗೊತ್ತು, ಹೆಣ್ಣು ಮಕ್ಕಳ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. 1 ನೇ ಪ್ರತಿವಾದಿಗೆ ಆರ್ ಸಿ ಪಾಟೀಲ್ ರವರ ಮೂಲಕ 2 ಜನ ಗಂಡು ಮಕ್ಕಳ ಜೊತೆಗೆ ವಾದಿಯರು ಸಹ ಮಕ್ಕಳಿರುತ್ತಾರೆ ಎಂಬ ವಿಚಾರ ನಿಮ್ಮ ತಂದೆಗೆ ಗೊತ್ತಿರುತ್ತದೆ ಅಂದರೆ ಸಾಕ್ಷಿ ನನ್ನ ತಂದೆಗೆ ಆರ್ ಸಿ ಪಾಟೀಲ್ ಮತ್ತು 1 ನೇ ಪ್ರತಿವಾದಿಯವರಿಂದ 2 ಜನ ಗಂಡು ಮಕ್ಕಳು ಜನಿಸಿರುವುದು ಮಾತ್ರ ಗೊತ್ತು, ವಾದಿಗಳ ಜನನದ ಬಗ್ಗೆ ಗೊತ್ತಿರುವುದಿಲ್ಲ ಎನ್ನುತ್ತಾರೆ. ನಿಮ್ಮ ತಂದೆಯವರು ಆರ್ ಸಿ ಪಾಟೀಲ್ ರವರಿಗೆ 1 ನೇ ಪ್ರತಿವಾದಿಯ ಮೂಲಕ ವಾದಿಯರು ಸಹ ಜನಿಸಿರುತ್ತಾರೆ ಎಂಬ ವಿಷಯವನ್ನು ಒಪ್ಪಿಕೊಂಡಿರುತ್ತಾರೆ ಅಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆರ್ ಸಿ

ಪಾಟೀಲ್ ರವರು ದೊಡ್ಡ ಜಮೀನುದಾರರು ಇರುತ್ತಾರೆ ಅಂದರೆ ಸರಿ. ಆರ್ ಸಿ ಪಾಟೀಲ್ ರವರು ರೈಸ್ ಮಿಲ್ ನ ಮಾಲೀಕರು ಸಹ ಇರುತ್ತಾರೆ ಅಂದರೆ ಸರಿ. ದಾವಾ ಆಸ್ತಿಗಳು ಆರ್ ಸಿ ಪಾಟೀಲ್ ರವರಿಗೆ ತಮ್ಮ ಹಿರಿಯರಿಂದ ಬಂದ ಆಸ್ತಿಗಳು ಇರುತ್ತವೆ ಅಂದರೆ ಸಾಕ್ಷಿ ಇರಬಹುದು ಆ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆರ್ ಸಿ ಪಾಟೀಲ್ ರವರು ಸೊರಬ ವಿಧಾನ ಸಭೆಯ ಎಲೆಕ್ಷನ್ ಗೆ ಸ್ಪರ್ಧೆ ಮಾಡಿದ್ದರು ಅಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಎ ಶೆಡ್ಯೂಲ್ 11 ನೇ ಸ್ವತ್ತು ಆರ್ ಸಿ ಪಾಟೀಲ್ ರವರ ಪಿತ್ರಾರ್ಜಿತ ಸ್ವತ್ತು ಮತ್ತು ಅವರಿಗೆ ವಾದಿಗಳು ಮಕ್ಕಳಿರುತ್ತಾರೆಂಬ ವಿಷಯ ಗೊತ್ತಿದ್ದರು ಸಹ ನಿಮ್ಮ ತಂದೆ ಆ ಆಸ್ತಿಗಳನ್ನು ಖರೀದಿ ಮಾಡಿರುತ್ತಾರೆ ಅಂದರೆ ಸಾಕ್ಷಿ ಪಾಲು ವಿಭಾಗ ಆದ ನಂತರ ನನ್ನ ತಂದೆ ಆ ಆಸ್ತಿಗಳನ್ನು ಖರೀದಿ ಮಾಡಿರುತ್ತಾರೆ ಎನ್ನುತ್ತಾರೆ. ಪಾಲು ವಿಭಾಗ ಆರ್ ಸಿ ಪಾಟೀಲ್ ಮತ್ತು ಆತನ ಗಂಡು ಮಕ್ಕಳ ಮಧ್ಯೆ ಮಾತ್ರ ಆಗಿತ್ತು ಅಂದರೆ ಸಾಕ್ಷಿ ಯಾರ್-ಯಾರ ಮಧ್ಯೆ ಪಾಲು ವಿಭಾಗ ಆಗಿರುತ್ತದೆ ಎಂದು ಗೊತ್ತಿಲ್ಲ ಆದರೆ ಪಾಲು ವಿಭಾಗ ಆಗಿರುವುದರ ಬಗ್ಗೆ ಮಾತ್ರ ಗೊತ್ತು ಎನ್ನುತ್ತಾರೆ. ದಾವಾ ಇತರೆ ಆಸ್ತಿಗಳ ಜೊತೆಗೆ ದಾವಾ ಎ ಶೆಡ್ಯೂಲ್ 11 ನೇ ಆಸ್ತಿಯಲ್ಲಿ ಸಹ ವಾದಿಗಳಿಗೂ ಜನ್ಮಸಿದ್ದ ಹಿಸ್ಸೆ ಹಕ್ಕು ಇತ್ತು ಅಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ತಂದೆ ದಾವಾ ಎ ಶೆಡ್ಯೂಲ್ 11 ನೇ ಆಸ್ತಿಯನ್ನು ಯೋಗ್ಯ ಪ್ರತಿಫಲ ಕೊಟ್ಟು ಖರೀದಿ ಮಾಡಿರುವ ಮುಗ್ದ ಮತ್ತು ಪ್ರಾಮಾಣೀಕ ಖರೀದಿದಾರರು ಇರುವುದಿಲ್ಲ ಅಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)

ನನ್ನ ಸಮಕ್ಷಮ
ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸೊರಬ.